**ಮೋಟಾರು ವಾಹನ ಅಪಘಾತಗಳ ಪರಿಹಾರ ಮಂಡಳಿ, ಬೆಂಗಳೂರು,**

**1ನೇ ಲಘು ವ್ಯವಹಾರಗಳ ನ್ಯಾಯಾಲಯ ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ ಬೆಂಗಳೂರು**

**ಎಂ.ವಿ.ಸಿ.ಃ 4241/2023**

ಆರ್.ಡಬ್ಲೂ **1**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | ಶಶಿಕಲ |
| ಗಂಡನ **ಹೆಸರು** | ಃ | ರಂಗಪ್ಪ |
| **ವಯಸ್ಸು** | ಃ | **48** ವರ್ಷ |
| **ಉದ್ಯೋಗ** | ಃ | ಎಂ.ಆರ್.ಡಿ, ನಾರಾಯಣ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ |
| **ವಾಸ ಸ್ಥಳ** | ಃ | ಬೆಂಗಳೂರು |

**ದಿನಾಂಕಃ 25.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ 1ನೇ ಎದುರುದಾರರ ಪರ ಮಾನ್ಯ ವಕೀಲರಿಂದ.**

ನ್ಯಾಯಾಲಯದಿಂದ ಸಮನು ಬಂದ ಕಾರಣ ನಾನು ಈ ದಿನ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಮತ್ತು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದೇನೆ .

ನಾನು ಸುಮಾರು 5 ವರ್ಷಗಳಿಂದ ಮೇಲೆ ತಿಳಿಸಿದ ಆಸ್ಪತ್ರೆಯಲ್ಲಿ ಎಂ.ಆರ್.ಡಿ ಆಗಿ ಕೆಲಸ ಮಾಡುತ್ತಿದ್ದೇನೆ. ಅಧಿಕಾರ ಪತ್ರವನ್ನು **ನಿ.ಆರ್ 1** ಎಂದು, ಕೇಸ್ ಶೀಟನ್ನು **ನಿ.ಆರ್ 2** ಎಂದು ಗುರುತಿಸಲಾಯಿತು.

ನ್ಯಾಯಾಲಯದಿಂದ ಬಂದಂತಹ ಸಮನ್ಸ್ ನಲ್ಲಿ ಎಂ.ಎಲ್.ಸಿ ಯನ್ನು ಹಾಜರುಪಡಿಸುವಂತೆ ತಿಳಿಸಲಾಗಿತ್ತು. ಸದರಿ ದಾಖಲಾತಿಯ ನಮ್ಮಲ್ಲಿ ಲಭ್ಯವಿಲ್ಲದ ಕಾರಣ ಅದನ್ನು ಹಾಜರುಪಡಿಸಿಲ್ಲ.

ಸಾಕ್ಷಿದಾರನನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಬೇಕೆಂದು 1ನೇ ಎದುರುದಾರರ ಪರ ಮಾನ್ಯ ವಕೀಲರು ಕೋರಿದ್ದು ಸಾಕ್ಷಿದಾರನನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲಾಯಿತು ಮತ್ತು ಸಾಕ್ಷಿದಾರನನ್ನು ಪಾಟೀ ಸವಾಲಿಗೆ ಗುರಿಪಡಿಸಲು ಅನುಮತಿಸಲಾಯಿತು.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಮಾನ್ಯ ವಕೀಲರಿಂದ.**

ಸಾಮಾನ್ಯವಾಗಿ ಅಪಘಾತದ ಪ್ರಕರಣದಲ್ಲಿ ಗಾಯಾಳು ಬಂದಾಗ ಎಂ.ಎಲ್.ಸಿ ಮಾಡುತ್ತೇವೆ ಮತ್ತು ಪೊಲೀಸರಿಗೆ ಮಾಹಿತಿ ನೀಡುತ್ತೇವೆ ಎಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿ ಯಾವ ಕಾರಣಕ್ಕಾಗಿ ಎಂ.ಎಲ್.ಸಿ ಮಾಡಿಲ್ಲ ಎಂದರೆ ಸಾಕ್ಷಿಯು ಗಾಯಾಳು ವಿಜಯಶ್ರೀ ಮತ್ತು ಇ.ಎಸ್.ಐ ಆಸ್ಪತ್ರೆಯಿಂದ ಶಿಫಾರಸ್ಸಿ ನ ಮೇರೆಗೆ ಬಂದ ಕಾರಣ ಮಾಡಿಲ್ಲ ಎಂದು ನುಡಿಯುತ್ತಾರೆ. ನಿಪಿ 6 ಅನ್ನು ನಮ್ಮ ಆಸ್ಪತ್ರೆಯಿಂದ ನೀಡಲಾಗಿದೆ ಎಂದರೆ ಸರಿ. ನಿಪಿ 6 ರಲ್ಲಿ ಅಪಘಾತದ ಹಿನ್ನೆಲೆ ಸ್ಕಿಡ್ ಆ್ಯಂಡ್ ಫಾಲ್ ಎಂದು ನಮೂದು ಇದೆ ಎಂದರೆ ಸರಿ. ನಿ.ಆರ್ 2 ರ ಮೂಲ ದಾಖಲಾತಿ ಆಸ್ಪತ್ರೆಯಲ್ಲಿ ಇರುತ್ತದೆ. ಮೂಲ ಮೆಡಿಕಲ್ ಬಿಲ್ಲುಗಳನ್ನು ಇ.ಎಸ್.ಐ ಆಸ್ಪತ್ರೆಗೆ ನೀಡಿರುತ್ತೇವೆ.

ಆರ್.ಡಬ್ಲೂ 1 ಶಶಿಕಲ

<u>**ಪಾಟೀ ಸವಾಲುಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.**</u>

ನಿ.ಪಿ 6 ರಲ್ಲಿ ವಾಹನವನ್ನು ಯಾರು ಚಾಲನೆ ಮಾಡುತ್ತಿದ್ದರು ಮತ್ತು ಯಾರು ಹಿಂಬದಿ ಸವಾರರಾಗಿದ್ದರು ಎಂಬ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಿಪಿ 6 ಅನ್ನು ಬರೆದವರು ಮೃತಪಟ್ಟಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**